**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

ಸಿ.ಸಿ.ನಂಃ**359/2020**

ಸಿ.ಡಬ್ಲ್ಯೂ–೧೦ ಪಿ.ಡಬ್ಲ್ಯೂ-೬

| | | |
|---|---|---|
| ಹೆಸರು | ಃ | ಮಲ್ಲಮ್ಮ |
| ತಂದೆಃಗಂಡ | ಃ | ಸುರೇಶ |
| ವಯಸ್ಸು | ಃ | ೨೨ ವರ್ಷ |
| ಉದ್ಯೋಗ | : | ಖಾಸಗಿಕೆಲಸ |
| ವಾಸಸ್ಥಳ | ಃ | ಕಲಬುರಗಿ |

ದಿನಾಂಕಃ೩೧.೦೫.೨೦೨೩

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದಃ**

ಆರೋಪಿ ಪರಿಚಯ ಇರುವುದಿಲ್ಲ. ಚಾಸಾ-೧ ರಿಂದ ೯ ರವರ ಪರಿಚಯ ಇರುತ್ತದೆ. ಚಾಸಾ-೧೧ ನನ್ನ ತಾಯಿ. ಚಾಸಾ-೧೨, ೧೪, ೧೮, ೨೦ ರಿಂದ ೨೨ ರವರ ಪರಿಚಯ ಇರುವುದಿಲ್ಲ. ಮೃತ ದಾಮು ಹಾಗೂ ರತ್ನಾಬಾಯಿ ಪರಿಚಯ ಇರುತ್ತಾರೆ. ದಿಃ೧೦.೦೨.೨೦೨೦ ರಂದು ನನ್ನ ಅಣ್ಣನ ಮಗನಿಗೆ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಬರುತ್ತಿರುವಾಗ ನಾವು ಮಹಾಗಾಂವ ಕ್ರಾಸನಿಂದ ಟಂಟಂ ಹತ್ತಿಕೊಂಡೆವು. ಆಗ ಸಮಯ ೩.೦೦ ಗಂಟೆಯಾಗಿತ್ತು. ನಮ್ಮ ಊರು ೧ ಕಿ.ಮೀ ಇರುವಾಗ ಆರೋಪಿ ಟಂಟಂ ಅತೀವೇಗವಾಗಿ ಚಲಾಯಿಸಿಕೊಂಡು ಬಂದು ಪಲ್ಟಿ ಹೊಡಿಸಿರುತ್ತಾನೆ. ಆಗ ಒಬ್ಬರು ಸ್ಥಳದಲ್ಲೆ ಮೃತಪಟ್ಟರು ಮತ್ತೊಬ್ಬರು ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ಮೃತಪಟ್ಟರು ಮುಂದೆನಾಯಿತು ನನಗೆ ನೆನಪಿಲ್ಲ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)

**ಪಾಟೀ ಸವಾಲು ಃ ಸ.ಸ.ಅ. ವಕೀಲರಿಂದ.**

ಚಾಸಾ-19 ರವರ ತಾಯಿ ಸ್ಥಳದಲ್ಲೆ ಮೃತಪಟ್ಟಿರುತ್ತಾರೆ ಎಂದರೆ ಸರಿ. ನನ್ನ ಅಣ್ಣನ ಮಗ ಆದಿತ್ಯನಿಗೆ ಅಲ್ಲಲ್ಲಿ ಗಾಯಗಳು ಆಗಿರುತ್ತವೆ ಎಂದರೆ ಸರಿ. ಚಾಸಾ-21 ರವರ ಗಂಡ ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ಮೃತಪಟ್ಟಿರುತ್ತಾನೆ ಎಂದರೆ ಸರಿ. ಚಾಸಾ-8, 9 ನಾನು ಹಾಗೂ ಚಾಸಾ-11 ರಿಂದ 15 ರವರು ಸದರಿ ವಾಹನದಲ್ಲಿ ಸಂಚಾರ ಮಾಡುತ್ತಿದ್ದೆವು ಎಂದರೆ ಸರಿ. ಸದರಿ ಅಪಘಾತದಲ್ಲಿ ನನಗೂ ಪೆಟ್ಟಾಗಿತ್ತು ಎಂದರೆ ಸರಿ. ಚಾಸಾ-18 ಹಾಗೂ 16 ರವರು ನಮ್ಮನ್ನು ಗಾಡಿಯಲ್ಲಿ ಹಾಕಿಕೊಂಡು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ ಎಂದರೆ ಸರಿ. ಆರೋಪಿಯನ್ನು ತೋರಿಸಿ ಇವರೆ ವಾಹನವನ್ನು ಅತೀವೇಗವಾಯಿ ಚಲಾಯಿಸಿಕೊಂಡ ಬಂದಕಾರಣ ಅಪಘಾತವಾಗಿರುತ್ತದೆ ಎಂದರೆ ಸರಿ. ಆರೋಪಿಯ ಹೆಸರು ಮಂಜುನಾಥ ಎಂದರೆ ಸರಿ. ನಾನು ಈ ರೀತಿ ಪೋಲಿಸ

ಠಾಣೆಯಲ್ಲಿ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

**<u>ಪಾಟೀ ಸವಾಲು ಆರೋಪಿ ಪರ ಶ್ರೀ ಎಸ.ಎ.ಕೆ. ವಕೀಲರಿಂದ.</u>**

ನಾನು ಘಟನೆಯ ಬಗ್ಗೆ ಪೋಲಿಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ. ನಾನು ನಮ್ಮ ಮನೆಯಲ್ಲಿ ಹೇಳಿಕೆಯನ್ನು ನೀಡಿರುತ್ತೇನೆ. ನನಗೆ ಯಾವ ದಿನದಂದು ಹೇಳಿಕೆ ನೀಡಿರುತ್ತೇನೆ ಎಂದು ನಿಖರವಾಗಿ ದಿನಾಂಕ ನೆನಪಿಲ್ಲ. ಅಪಘಾತವು ನಮ್ಮ ಊರು 1 ಕಿ.ಮೀ ಇರುವ ಮುಂಚೆ ಹಳ್ಳದ ಹತ್ತಿರ ಆಗಿರುತ್ತದೆ. ಅಪಘಾತವಾದ ಸ್ಥಳದಲ್ಲಿ ರಸ್ತೆ ತಿರುವು ಇತ್ತು ಎಂದರೆ ಸರಿ. ಅಪಘಾತವಾದಾಗ ರಸ್ತೆ ಸರಿ ಇರಲಿಲ್ಲ ಎಂದರೆ ಸರಿ. ಘಟನಾ ಸ್ಥಳದ ಚಕ್ಕುಬಂದಿ ನನಗೆ ಹೇಳಲು ಬರುವುದಿಲ್ಲ. ಸಾಮಾನ್ಯವಾಗಿ ರಸ್ತೆ ತಿರುವು ಇದ್ದಾಗ ವಾಹನಗಳು ನಿಧಾನವಾಗಿ ಚಲಾಯಿಸುತ್ತಾರೆ ಎಂದರೆ ಸರಿ. ಅಪಘಾತವಾದ ನಂತರ ನಾನು ನಮ್ಮ ಮನೆಯವರಿಗೆ ಕರೆಮಾಡಿದೆನು ನಂತರ ನನಗೆ ಆಯಾತಪ್ಪಿತ್ತು ಆಗ ನನ್ನನ್ನು ಸರ್ಕಾರಿ ಆಸ್ಪತ್ರೆ ಅಂಬಲಗಾಗೆ ಕರೆದುಕೊಂಡು ಹೊದರು. ಅಂಬಲಗಾ ಆಸ್ಪತ್ರೆಯಿಂದ ಅರ್ಧ ಗಂಟೆ ನಂತರ ಕಲಬುರಗಿ ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಹೊದರು. ನನಗೆ ತಲೆಗೆ ಹಾಗೂ ಬೆನ್ನಿನ ಮೇಲೆ ಗಾಯಗಳು ಆಗಿದ್ದವು. ವಾಹನ ಅಪಘಾತವಾಗುವಾಗ 100 ಕಿ.ಮೀ ಪ್ರತಿ ಗಂಟೆ ವೇಗದಲ್ಲಿ ನಡೆಸುತ್ತಿದ್ದರು ಎಂದು ಹೇಳುತ್ತಾರೆ. ಟಂಟಂ ವಾಹನ 100 ಕಿ.ಮೀ ಪ್ರತಿ ಗಂಟೆ ವೇಗ ಚಲಾಯಿಸಲು ಬರುವುದಿಲ್ಲ ಎಂದರೆ ಸರಿ ಅಲ್ಲ. ಮೃತಪಟ್ಟವರ ಕುಟುಂಬಕ್ಕೆ ಪರಿಹಾರ ಧನ ಬರಬೇಕು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿ ಅಲ್ಲ.

ಚಾಸಾ-19 ರವರ ತಾಯಿ ಸ್ಥಳದಲ್ಲೆ ಮೃತಪಟ್ಟಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿ ಅಲ್ಲ. ನನ್ನ ಅಣ್ಣನ ಮಗ ಆದಿತ್ಯನಿಗೆ ಅಲ್ಲಲ್ಲಿ ಗಾಯಗಳು ಆಗಿರುತ್ತವೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿ ಅಲ್ಲ. ಚಾಸಾ-21 ರವರ ಗಂಡ ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ಮೃತಪಟ್ಟಿರುತ್ತಾನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿ ಅಲ್ಲ. ಚಾಸಾ-8, 9 ನಾನು ಹಾಗೂ ಚಾಸಾ-11 ರಿಂದ 15 ರವರು ಸದರಿ ವಾಹನದಲ್ಲಿ ಸಂಚಾರ ಮಾಡುತ್ತಿದ್ದೆವು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿ ಅಲ್ಲ. ಸದರಿ ಅಪಘಾತದಲ್ಲಿ ನನಗೂ ಪೆಟ್ಟಾಗಿತ್ತು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿ ಅಲ್ಲ. ಚಾಸಾ-18 ಹಾಗೂ 16 ರವರು ನಮ್ಮನ್ನು ಗಾಡಿಯಲ್ಲಿ ಹಾಕಿಕೊಂಡು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿ ಅಲ್ಲ. ಆರೋಪಿಯನ್ನು ತೋರಿಸಿ ಇವರೆ ವಾಹನವನ್ನು ಅತೀವೇಗವಾಯಿ ಚಲಾಯಿಸಿಕೊಂಡ ಬಂದಕಾರಣ ಅಪಘಾತವಾಗಿರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿ ಅಲ್ಲ. ಆರೋಪಿಯ ಹೆಸರು ಮಂಜುನಾಥ ಎಂದರೆ ಸರಿ. ನಾನು ಈ ರೀತಿ ಪೋಲಿಸ ಠಾಣೆಯಲ್ಲಿ ಹೇಳಿಕೆ ನೀಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿ ಅಲ್ಲ.

**<u>ಮರು ವಿಚಾರಣೆಃ</u>** ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ